ಕರ್ನಾಟಕ ಸರ್ಕಾರ
(ಜಲಾನಯನ ಅಭಿವೃದ್ಧಿ ಇಲಾಖೆ)

ಸಂ:ಜಅಇ/ಉಕೃನಿ/ಜಕೋ/ಕೃಅ2/PMKSY-WD/ಅಬಿ/48/19-20

ಆಯುಕ್ತರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ, ಕೆ.ಹೆಚ್.ಬಿ ಕಾಂಪ್ಲೆಕ್ಸ್,
ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09
ದಿನಾಂಕ:07.11.2019

email:wdd.cell@gmail.com

## ಕಛೇರಿ ಅದೇಶ

**ವಿಷಯ:** ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC) ಕಾರ್ಯಕ್ರಮದಡಿ ಹಾಸನ ಜಿಲ್ಲೆಯಲ್ಲಿನ SCSP ಮತ್ತು TSP ಘಟಕದಡಿ ವೆಚ್ಚವಾಗದೇ ಉಳಿಕೆಯಾಗಿರುವ ಅನುದಾನವನ್ನು ಹಿಂಪಡೆದು ಚಿಕ್ಕಬಳ್ಳಾಪುರ ಜಿಲ್ಲೆಯ ಬ್ಯಾಚ್-III ರ ಯೋಜನೆಗಳಿಗೆ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1. ಜಂಕೃನಿ/ಕೃಇ/ಚಿಪುರ/ಅಬಿ/ಬ್ಯಾಚ್3/2019-20, ದಿನಾಂಕ:23.09.2019
2. ಜಕೃನಿ/ಹಾ/ತಾಂ-2/SCP&TSP/ಅಹಿ/2019-20, ದಿನಾಂಕ:25.10.2019

*****

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2018-19 ಮತ್ತು ಅದರ ಹಿಂದಿನ ಸಾಲುಗಳಲ್ಲಿ ಹಾಸನ ಜಿಲ್ಲೆಗೆ **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC)** ಕಾರ್ಯಕ್ರಮದಡಿ ಬಿಡುಗಡೆ ಮಾಡಲಾಗಿದ್ದ ಅನುದಾನದಲ್ಲಿ ರೂ.22.66 ಲಕ್ಷಗಳ SCSP ಘಟಕ ಹಾಗೂ ರೂ.97.15 ಲಕ್ಷಗಳ TSP ಘಟಕದಡಿಯಲ್ಲಿನ ಅನುದಾನವು, ಸದರಿ ಜಿಲ್ಲೆಯ ಬ್ಯಾಚ್-IV ರ ಯೋಜನೆಗಳ ವ್ಯಾಪ್ತಿಯಲ್ಲಿ ಸದರಿ ಘಟಕಗಳ ಫಲಾನುಭವಿಗಳ ಲಭ್ಯತೆ ಇಲ್ಲದೇ ಉಳಿಕೆಯಾಗಿರುತ್ತದೆ (ಉಲ್ಲೇಖ-2).

ಈ ಹಿನ್ನೆಲೆಯಲ್ಲಿ ಸದರಿ ಅನುದಾನವನ್ನು ಹಿಂಪಡೆಯಲು ಜಂಟಿ ಕೃಷಿ ನಿರ್ದೇಶಕರು, ಹಾಸನ ರವರು ಸಂಬಂಧಪಟ್ಟ ಯೋಜನೆಯ ತಾಲ್ಲೂಕುಗಳ ವ್ಯಾಪ್ತಿಯ ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಸಮಿತಿಯ ಅಧ್ಯಕ್ಷರು ಮತ್ತು ಖಜಾಂಚಿಗಳಿಂದ ಫಲಾನುಭವಿಗಳ ಲಭ್ಯತೆ ಇಲ್ಲದಿರುವ ಬಗ್ಗೆ ಧೃಢೀಕರಣವನ್ನು ಪಡೆದು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಂದುವರೆದು ಉಲ್ಲೇಖ-1 ರಲ್ಲಿ ಜಂಟಿ ಕೃಷಿ ನಿರ್ದೇಶಕರು, ಚಿಕ್ಕಬಳ್ಳಾಪುರ ರವರು **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC)** ಕಾರ್ಯಕ್ರಮದಡಿ ವಿಸ್ತೃತ ಯೋಜನಾ ವರದಿಯ ಪ್ರಕಾರ ಚಟುವಟಿಕೆ/ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಒಟ್ಟು ರೂ.157.00 ಲಕ್ಷಗಳ ಅನುದಾನದ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆದುದರಿಂದ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲು ಆದೇಶ ಹೊರಡಿಸಿದೆ.

## ಆದೇಶ

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC)** ಕಾರ್ಯಕ್ರಮದಡಿ ಜಂಟಿ ಕೃಷಿ ನಿರ್ದೇಶಕರು, ಹಾಸನರವರಿಗೆ ಬಿಡುಗಡೆ ಮಾಡಲಾದ ಅನುದಾನದಲ್ಲಿ ಒಟ್ಟು **ರೂ. 119.81 ಲಕ್ಷಗಳ (ಪರಿಶಿಷ್ಟ ಜಾತಿ ಉಪಯೋಜನೆಯಡಿ ಒಟ್ಟು ರೂ.22.66 ಮತ್ತು ಗಿರಿಜನ ಉಪಯೋಜನೆಯಡಿ ರೂ.97.15) ಅನುದಾನವನ್ನು** ಜಂಟಿ ಕೃಷಿ ನಿರ್ದೇಶಕರು, ಹಾಸನ ರವರ ಯೋಜನಾ ಖಾತೆಯಿಂದ ಹಿಂಪಡೆದು, ಉಲ್ಲೇಖಿತ ಪತ್ರ (1) ರ ಕೋರಿಕೆಯಂತೆ ಚಿಕ್ಕಬಳ್ಳಾಪುರ ಜಿಲ್ಲೆಯ **ಬ್ಯಾಚ್-III**

ಮು. ಲಿ. ಶಾ.

ಯೋಜನೆಗಳಿಗೆ ಬಿಡುಗಡೆ ಮಾಡಿ, ವಿಸ್ತೃತ ಯೋಜನಾ ವರದಿಯ ಪ್ರಕಾರ ಬಾಕಿ ಚಟುವಟಿಕೆಗಳನ್ನು ಜಲಾನಯನ ಅಭಿವೃದ್ಧಿ ಇಲಾಖೆಯ ಮಾರ್ಗಸೂಚಿಗಳ ಪ್ರಕಾರ ನಿಯಾಮಾನಯಸಾರ ವೆಚ್ಚ ಭರಿಸಲು ಸೂಚಿಸಿದೆ.

ರೂ.ಲಕ್ಷಗಳಲ್ಲಿ

| ಕ್ರ.ಸಂ | ಜಿಲ್ಲೆ | ಬ್ಯಾಚ್‌ನ ಹೆಸರು | ಪರಿಶಿಷ್ಟ ಜಾತಿ ಉಪ ಯೋಜನೆ (422) | ಗಿರಿಜನ ಉಪ ಯೋಜನೆ (423) | ಒಟ್ಟು |
|---|---|---|---|---|---|
| 1 | 2 | 3 | 4 | 5 | 6 |
| 1 | ಚಿಕ್ಕಬಳ್ಳಾಪುರ | ಬ್ಯಾಚ್-III | 22.66 | 97.15 | 119.81 |

ಈ ಮೇಲಿನಂತೆ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡ ನಿಯಮ ಮತ್ತು ಷರತ್ತುಗಳ ಪ್ರಕಾರ ವೆಚ್ಚ ಭರಿಸಲು ಕ್ರಮವಹಿಸುವುದು.

1. **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ (PMKSY-WDC)** ಕಾರ್ಯಕ್ರಮದಡಿ ಕ್ರಿಯಾ ಯೋಜನೆಯ ಮತ್ತು ಅನುಮೋದಿತ ಡಿ.ಪಿ.ಆರ್ ಪ್ರಕಾರ ವೆಚ್ಚ ಭರಿಸಲು ಕ್ರಮವಹಿಸುವುದು. ಮುಕ್ತಾಯ ಹಂತದಲ್ಲಿರುವ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದು.
2. ಕೇಂದ್ರ ಸರ್ಕಾರದ ಸಾಮಾನ್ಯ ಮಾರ್ಗಸೂಚಿ-2008 (ಪರಿಷ್ಕರಿಸಿದ ಆವೃತಿ-2011) ರ ಹಾಗೂ ಜಲಾನಯನ ಯೋಜನೆಗಳ ಕಾರ್ಯಚರಣೆ ಕೈಪಿಡಿಯ ಹಾಗೂ ಕೇಂದ್ರ ಕಚೇರಿಯಿಂದ ಯೋಜನೆಯ ಅನುಷ್ಠಾನದ ಕುರಿತು ಈಗಾಗಲೇ ನೀಡಲಾದ ಸುತ್ತೋಲೆಗಳು ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದು.
3. ಜಲಾನಯನ ಚಟುವಟಿಕೆ/ಕಾಮಗಾರಿಗಳನ್ನು ಅನುಮೋದಿತ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿಯೇ ಮಾತ್ರ ಅನುಷ್ಠಾನ ಮಾಡುವುದು (Watershed activities should be implented within in the approved project area)
4. ಜಲಾನಯನ ಚಟುವಟಿಕೆ ಮತ್ತು ಕಾಮಗಾರಿಗಳನ್ನು ಅನುಮೋದಿತ ಯೋಜನಾ ವೆಚ್ಚದ ಮಿತಿಯೊಳಗೆ ಅನುಷ್ಠಾನ ಮಾಡುವುದು (Within the approved project cost), ಜಲಾನಯನ ಕಾಮಗಾರಿ ಹೊರತುಪಡಿಸಿ ಉಳಿದ ಘಟಕಗಳಡಿ ಸದರಿ ಘಟಕಗಳಿಗೆ ನಿಗಧಿಯಾದ ಅನುದಾನಕ್ಕಿಂತ ಹೆಚ್ಚಿನ ಅನುದಾನ ಬಳಕೆಗೆ ಅವಕಾಶವಿರುವುದಿಲ್ಲ.
5. ಖಾಸಗಿ ಭೂಮಿಯಲ್ಲಿ ಕಾರ್ಯಗತಗೊಳಿಸುವ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ (Natural Resource mangement) ಸಂಭಂದಿಸಿದ ಕಾಮಗಾರಿ/ಚಟುವಟಿಕೆಗಳಿಗೆ ಕಡ್ಡಾಯವಾಗಿ ನಿಯಾಮನುಸಾರ ಫಲಾನುಭವಿ ವಂತಿಗೆಯನ್ನು ಸಂಗ್ರಹಿಸಿ ಜಲಾನಯನ ಅಭಿವೃದ್ಧಿ ನಿದಿಗೆ ಜಮಾ ಮಾಡುವುದು.
6. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಅವಶ್ಯಕತೆ ಇದ್ದಲ್ಲಿ ಬ್ಯಾಚ್-IV ರ ಯೋಜನೆಗಳಿಗೆ ಅಂತರಬ್ಯಾಚ್ (Inter batch) ಬದಲಾವಣೆ ಮಾಡಿಕೊಳ್ಳುವುದು. ಅಂತರ ಬ್ಯಾಚ್ (Inter batch) ಬದಲಾವಣೆ ಮಾಡಿಕೊಳ್ಳುವ ಮುನ್ನ ಆಯಾ ಬ್ಯಾಚ್‌ನ ಅನುಮೋದಿತ ಯೋಜನಾ ವೆಚ್ಚದ ಗರಿಷ್ಠ ಮೀತಿ ಮೀರದಂತೆ ಕ್ರಮವಹಿಸುವುದು.
7. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅಧೀನ ಕಛೇರಿಗಳಿಗೆ ಬಿಡುಗಡೆಯಾಗುವ ಅನುದಾನವು ಇಲಾಖೆಯು ಕೈಗೊಳ್ಳುವ ಆಂತರಿಕ ಆಡಿಟ್ ಮತ್ತು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ರವರ ಕಛೇರಿಯ ಆಡಿಟ್‌ಗೆ ಒಳಪಡುತ್ತದೆ.
8. ಬಿಡುಗಡೆ ಮಾಡಲಾದ ಅನುದಾನದಿಂದ ವಾಹನಗಳು/ಪೋಟೋಕಾಪಿಯರ್/ವಿಡಿಯೋ ರೆಕಾರ್ಡರ್/ಪ್ರೊಜೆಕ್ಟರ್, ಇನ್ನಿತರೆ ಯಾವುದೇ ಕ್ಯಾಪಿಟಲ್ ವಸ್ತುಗಳನ್ನು ಖರೀದಿಸಲು ಅನುಮತಿಸಲಾಗಿರುವುದಿಲ್ಲ.
9. ಜಂಟಿ ಕೃಷಿ ನಿರ್ದೇಶಕರು/ಉಪ ಕೃಷಿ ನಿರ್ದೇಶಕರು/ಸಹಾಯಕ ಕೃಷಿ ನಿರ್ದೇಶಕರು ಎಲ್ಲಾ ಜಲಾನಯನ ಸಮಿತಿಗಳಲ್ಲಿ ಕನಿಷ್ಠ ಉಳಿಕೆ ಅನುದಾನ ಇರುವಂತೆ ಖಾತ್ರಿಪಡಿಸಿಕೊಳ್ಳಬೇಕು. ನಿಯಮಿತವಾಗಿ ಅನುಷ್ಠಾನ ಮಾಡಲಾದ ಚಟುವಟಿಕೆಗಳ ವಿವರಗಳನ್ನು ಎಂ.ಐ.ಎಸ್‌ನಲ್ಲಿ ಹಾಗೂ ಮಾಡರೇಟ್ ಮಾಡಲಾದ ಛಾಯಾ ಚಿತ್ರಗಳನ್ನು ಭುವನ್ ಪೋರ್ಟಲ್‌ನಲ್ಲಿ ತಪ್ಪದೇ ಅಪ್‌ಲೋಡ್ ಮಾಡಬೇಕು.

| | |
|---|---|
| 6 | ಕಾಮಗಾರಿ/ಚಟುವಟಿಕೆಯ ಅನುಷ್ಠಾನ ಹಂತದ ಜಿಪಿಎಸ್‌ಯುಕ್ತ ಛಾಯಚಿತ್ರ |
| 7 | ಬಿಲ್ಸ್ ಮತ್ತು ವೋಚರ್‌ಗಳ ಪ್ರತಿ |
| 8 | ಕಾಮಗಾರಿ ಮುಕ್ತಾಯದ ವರದಿ/ಓಕೆ ಕಾರ್ಡ್ |
| 9 | ಕಾಮಗಾರಿ/ಚಟುವಟಿಕೆ ಮುಕ್ತಾಯಗೊಂಡ ನಂತರದ ಜಿಪಿಎಸ್‌ಯುಕ್ತ ಛಾಯ ಚಿತ್ರ |

19. ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ಅನುಮೋದಿತ ಡಿ.ಪಿ.ಆರ್ ಪ್ರಕಾರ ಖಜಾನೆಯಿಂದ ಆರ್ಥಿಕ ವರ್ಷದ ಮಾರ್ಚ್ ಮಾಹೆಯೊಳಗೆ ಡ್ರಾ ಮಾಡಿ, ಸರಿಯಾಗಿ ಆಗಿರುವ ಜಲಾನಯನ ಚಟುವಟಿಕೆ/ಕಾಮಗಾರಿಗಳಿಗೆ ವೆಚ್ಚ ಭರಿಸುವುದು ಹಾಗೂ ಉಪಯೋಗಿತ ಪತ್ರವನ್ನು ಕೇಂದ್ರ ಕಚೇರಿಗೆ ಸಲ್ಲಿಸಲು ಸೂಚಿಸಿದೆ.

ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ
**ಹಾಗು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕೃಷಿ**
**ಮತ್ತು ತೋಟಗಾರಿಕೆ ಇಲಾಖೆ**

**ಇವರಿಗೆ,**
ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, **ಹಾಸನ ಮತ್ತು ಚಿಕ್ಕಬಳ್ಳಾಪುರ** ಜಿಲ್ಲೆ, ಕೃಷಿ ಇಲಾಖೆ

**ಪ್ರತಿಯನ್ನು:**
ಮುಖ್ಯ ಲೆಕ್ಕಾಧಿಕಾಗಳು, ಕೇಂದ್ರ ಕಛೇರಿ ರವರಿಗೆ ಕಳುಹಿಸುತ್ತಾ ಈ ದಿನವೇ **ಚಿಕ್ಕಬಳ್ಳಾಪುರ ಜಿಲ್ಲೆಗೆ** ಅನುದಾನವನ್ನು, ಜಂಟಿ ಕೃಷಿ ನಿರ್ದೇಶಕರು, ಹಾಸನ ಜಿಲ್ಲೆ ರವರ ಯೋಜನಾ ಖಾತೆಯಿಂದ ಹಿಂಪಡೆದು, ಚಿಕ್ಕಬಳ್ಳಾಪುರ ಜಿಲ್ಲೆಗೆ ಅನುದಾನ ಜಮೆ ಆದ ಬಗ್ಗೆ ಖಾತ್ರಿಪಡಿಸಿಕೊಂಡು ಆಯುಕ್ತರಿಗೆ ವರದಿ ನೀಡಲು ಸೂಚಿಸಿದೆ.

**ಪ್ರತಿ:**
1. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಆಯುಕ್ತರು ಕೃಷಿ ಇಲಾಖೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಸಂಬಂಧಪಟ್ಟ ಜಿಲ್ಲೆಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಅಧ್ಯಕ್ಷರು, ಜಿಲ್ಲಾ ಮಟ್ಟದ ಜಲಾನಯನ ಸಮಿತಿ (DLC) ರವರಿಗೆ ಮಾಹಿತಿಗಾಗಿ
4. ಎಲ್ಲಾ ಘಟಕ ಮುಖ್ಯಸ್ಥರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ.
5. ಸಂಬಂಧಪಟ್ಟ ಜಿಲ್ಲೆಗಳ ನೋಡಲ್ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ
6. ಆಯುಕ್ತರು ಮತ್ತು ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ
7. ಕಛೇರಿ